ಅನು ಬೆಳ್ಳೆ ಹೆಸರಿನಲ್ಲಿ ಬರೆಯುವ ರಾಘವೇಂದ್ರ ಬಿ. ರಾವ್ ಕಾರ್ಕಳದ ಕ್ರಿಯೇಟಿವ್ ಪದವಿ ಪೂರ್ವ ಕಾಲೇಜಿನಲ್ಲಿ ವಾಣಿಜ್ಯ ಶಾಸ್ತ್ರ ವಿಭಾಗದ ಮುಖ್ಯಸ್ಥರು. ಕಥೆ ಮತ್ತು ಕಾದಂಬರಿಗಳ ಮೂಲಕ ಸಾಹಿತ್ಯಕ್ಷೇತ್ರದಲ್ಲಿ ಪರಿಚಿತರು. 'ಭೂತದ ಕೋಳಿ', 'ಬಿಳಿಕಾಗೆ', 'ಸುಡುಗಾಡ ಕಾಯ', 'ಕಥೆ ಇದಲ್ಲ' ಅವರ ಜನಪ್ರಿಯ ಕಥಾಸಂಕಲನಗಳು. 'ನಿಲುವು', 'ಜಾಡು', 'ಕುಡ್ವಲ್ ಭೂತ', 'ರಾಗದೀಪ', 'ಮರಳು ದಿಣ್ಣೆ', 'ರಣರಂಗ', 'ಚಕ್ರವ್ಯೂಹ' ಅವರ ಕೆಲವು ಕಾದಂಬರಿಗಳು.

ಹಿಂದೆ ಬಿದ್ದವರೆಲ್ಲ ಸಾಗಾಟವಾಗುವ ನಿರುಪಯುಕ್ತ ವಸ್ತುವಿನಂತೆ ಜೈಲಿನಿಂದ ಜೈಲಿಗೆ ವರ್ಗವಾಗುವುದನ್ನು ನೋಡಿಯೂ ಬುದ್ಧಿ ಇಲ್ಲದಂತೆ ವರ್ತಿಸುವುದನ್ನು ಗಮನಿಸುತ್ತಿದ್ದರೂ ಕ್ಯಾರೇ ಎನ್ನಲಿಲ್ಲ. ಬಹಳ ಸರ್ತಿ ಅವಳು ಎದುರಾದಾಗಲೂ ಅವನು ತಪ್ಪಿಸಿಕೊಂಡು ಹೋಗುತ್ತಿದ್ದ. ಅವಳಿಗೆ ಇವನು ಬಡಪಟ್ಟಿಗೆ ಬಗ್ಗುವ ಅಸಾಮಿಯಲ್ಲವೆನಿಸಿತು. ಅದಕ್ಕೆಂದೇ ನೇರವಾಗಿ ಮಾನಪ್ಪನನ್ನು ಹುಡುಕಿಕೊಂಡು ಹೋದಳು.

ಮಾನಪ್ಪ ಬಹಳ ಆತ್ಮೀಯವಾಗಿ ಅವಳನ್ನು ಬರಮಾಡಿಕೊಂಡ. ಅವನು ಲಂಚಕ್ಕಾಗಿ ಕಾಯುವನೆಂದು ಆಹ್ವಾನಿಸಿದಳು. ಅವನು ತನ್ನ ಊಟವಾಗಿದೆಯೆಂದು ಸಂಜ್ಞೆ ಮಾಡಿದ. ನಿಟ್ಟುಸಿರಿಟ್ಟು ಬಂದ ಕಾರಣವನ್ನು ಹೇಳಿದಳು. ಅವಳ ಡಿಮಾಂಡ್ ಎಷ್ಟು ಎನ್ನುವುದನ್ನು ತಿಳಿದುಕೊಂಡ. ಅದರಲ್ಲಿ ಒಂದು ಭಾಗ ತನ್ನದ್ದನ್ನೂ ಸೇರಿಸಿಕೊಂಡ. ಜೊತೆಗೆ ಅವಳೊಳಗಿರುವ ಇನ್ನೊಂದು ಜೀವಕ್ಕೆ ಮಂಜುವೇ ಕಾರಣವೆನ್ನುವುದನ್ನು ತಿಳಿದುಕೊಳ್ಳಲು ಅವಳಿಗೆ ಬೇರೆ ಯಾರ ಸಂಪರ್ಕವಿಲ್ಲವೆನ್ನುವುದನ್ನು ಖಚಿತಪಡಿಸಿಕೊಂಡ. ಅವಳು ನಡೆದ ಘಟನೆಯನ್ನೆಲ್ಲಾ ಕೂಲಂಕಷವಾಗಿ ಹೇಳಿದಳು. ಅಧಿಕಾರಿ ಒಂದು ಕಂಪ್ಲೇಂಟ್ ಬರೆದುಕೊಡುವಂತೆ ಹೇಳಿದ. ಪ್ರಸ್ತುತ ಎಂಥೆಂತಹ ವ್ಯಕ್ತಿಗಳು ಅತ್ಯಾಚಾರದ ಕೇಸ್‌ನಲ್ಲಿ ಒಳಗಿದ್ದು ಹೊರಗೆ ಬರಲು ಕಷ್ಟಪಡುತ್ತಿರುವುದನ್ನು ಸೋದಾಹರಣವಾಗಿ ಹೇಳುತ್ತಾ ಅವಳಿಗೆ ಭರವಸೆಯನ್ನು ನೀಡಿದ.

ಮಂಜುವಿಗೆ ಸ್ಟೇಶನ್‌ನಿಂದ ಬುಲಾವ್ ಹೋಯಿತು. ಅವನು ಅಳುಕುತ್ತಲೇ ಬಂದು ಅಧಿಕಾರಿಯನ್ನು ಭೇಟಿಯಾದ. ಅಧಿಕಾರಿ ಮಂಜುವನ್ನು ಮೇಲಿನಿಂದ ಕೆಳಗೆ ಅಳೆದ. ಬಹಳ ರಸಿಕತನವಿರುವ ಶ್ರೀಮಂತನೆನ್ನುವುದು ಸುಲಭದಲ್ಲಿ ಗುರುತಿಸಿಕೊಂಡ. 'ನಿಮ್ಮನ್ನು ಯಾಕೆ ಕರೆಸಿದ್ದೆಂದು ತಿಳಿದಿದೆಯೇ?' ಅಧಿಕಾರಿಯ ಮಾತಿಗೆ ಸಣ್ಣಗೆ ಬೆವರು ಕಾಣಿಸಿಕೊಂಡಿತು. ತನ್ನ ವ್ಯಾಪ್ತಿಯೊಳಗೆ ಬಂದವರಲ್ಲಿ ಅವನಿಗೆ ಮೊದಲು ತಲೆಗೆ ಬಂದದ್ದೇ ಪ್ರತ್ಯಕ್ಷ. ಆದರೂ ಠಾಣೆ ಮೆಟ್ಟಲೇರುವ ಸಂಗತಿಯಲ್ಲ ಅದು ಅನ್ನುವುದು ಮನದಟ್ಟಾಗಿತ್ತು. ಅವನು ಗೊತ್ತಿಲ್ಲವೆನ್ನುವಂತೆ ತಲೆಯಲ್ಲಾಡಿಸಿದ. ಅಧಿಕಾರಿ ಅವನ ಬಗ್ಗೆ ಕಂಪ್ಲೇಂಟ್ ಬಂದಿರುವ ವಿಷಯ ಹೇಳಿ, 'ನಿಮಗೆ ಅವರು ಗೊತ್ತೋ?' ಎಂದು ಅವಳ ಹೆಸರು ಹೇಳಿದ. ಮೊದಲೇ ಕಪ್ಪಗಿದ್ದ ಮುಖ ಇನ್ನಷ್ಟು ಬಿಳಚಿಕೊಂಡು ಗಾಢ ಕಪ್ಪು ಬಣ್ಣಕ್ಕೆ ತಿರುಗಿತು. ಯಾರೋ ಏನೋ ಎನ್ನುವಂತೆ ಕೈ ತಿರುವಿದ. ಅಧಿಕಾರಿಯ ನೋಟ ತೀಕ್ಷ್ಣವಾಯಿತು. ಅವನು ತಲೆ ತಗ್ಗಿಸಿ ನಿಂತ ಅಧಿಕಾರಿಯ ನೋಟಕ್ಕೆ. ಸುಳ್ಳು ಹೇಳುವುದನ್ನು ಅವನು ಸಹಿಸಲಾರನೆನ್ನುವುದು ಮನವರಿಕೆಯಾಯಿತು. ಅವನು ಯಾರ ಬಗ್ಗೆ ಹೇಳುತ್ತಿರುವನೋ ತಿಳಿಯಲಿಲ್ಲವೆಂದು ಹೇಳಿದರೂ ಅಧಿಕಾರಿ ಪಕ್ಕಾ ತಿಳಿಯಲಿಲ್ಲವೆಂದರೆ ಆಕೆಯನ್ನು ಕರೆಸುವುದಾಗಿ ಹೇಳಿದಾಗ ಇಂಗು ತಿಂದ ಮಂಗನಂತಾದ ಮಂಜು. ಅಧಿಕಾರಿಯ ಕ್ಷಮಾಪಣೆಯನ್ನು ಕೇಳಿ ಅದು ಅಂದಿನ ಕಥೆಯೆಂದೂ ಈಗ ಆಕೆಯ ಜೊತೆಗೆ ಸಂಪರ್ಕವೇ ಇಲ್ಲವೆನ್ನುವುದನ್ನು ತಿಳಿಸಿ ಆ ವಿಷಯಕ್ಕೆ ತಿಲಾಂಜಲಿ ನೀಡುವಂತೆ ಹೇಳಿದ. ಅಧಿಕಾರಿಗೆ ಅವನ ಬಗ್ಗೆ ಸಿಟ್ಟು ಬಂತು. ಅವನಿಗಾಗಿ ಸಂಸಾರವನ್ನು ಅಲಕ್ಷಿಸಿ ನಡೆದುಕೊಂಡು, ಅವನಿಗೆ ಸುಖ ನೀಡಿದ ಹೆಣ್ಣಿನ ಬಗ್ಗೆ ಕನಿಷ್ಠ ಗುಲಗುಂಜಿಯಷ್ಟು ಒಳ್ಳೆಯ ಅಭಿಪ್ರಾಯವಿಲ್ಲದ ಅವನ ಸ್ವಾರ್ಥವನ್ನು ಗ್ರಹಿಸಿ ಅವನನ್ನು ಹೇಗೆ ದಾರಿಗೆ ತರಬೇಕೆನ್ನುವುದನ್ನು ಯೋಚಿಸಿದ.

'ನಿನ್ನ ಆಗಿನ ಸಂಪರ್ಕದಿಂದಲೇ ಆಕೆ ಈಗ...' ಎಂದ ಅಧಿಕಾರಿ ಅದರ ಹೊಣೆಯನ್ನು ಹೊತ್ತುಕೊಳ್ಳಬೇಕೆಂದು ಅವನಿಗೆ ಮನದಟ್ಟು ಮಾಡಿದ. ಈಗ ಮಂಜುವಿನ